# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 650 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 12-03-2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ದಕ್ಷಿಣ ಕನ್ನಡ ಜಿಲ್ಲೆಯ ಗುಂಡ್ಯಾದಿಂದ ಬಂಟ್ವಾಳ ದವರೆಗೆ 4 ಪಥ ರಸ್ತೆ ಕಾಮಗಾರಿಯು ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದೇ ಕುಂಠಿತಗೊಂಡಿದ್ದು, ಪ್ರಯಾಣಿಕರಿಗೆ ಉಂಟಾದ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮವೇನು;</td><td rowspan="2">ದಕ್ಷಿಣ ಕನ್ನಡ ಜಿಲ್ಲೆಯ ಗುಂಡ್ಯದಿಂದ ಬಂಟ್ವಾಳದವರೆಗೆ 4 ಪಥದ ರಸ್ತೆ ಕಾಮಗಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿಯವರು ಈ ಕೆಳಕಂಡಂತೆ ವರದಿಸಿರುತ್ತಾರೆ.<br>ಅಡ್ಡಹೊಳೆಯಿಂದ ಬಂಟ್ವಾಳವರೆಗಿನ (ರಾಹೆ-75) ಹೆದ್ದಾರಿಯನ್ನು ದ್ವಿಪಥ ರಸ್ತೆಯಿಂದ 4 ಪಥದ ರಸ್ತೆಯನ್ನಾಗಿ ಮೇಲ್ದರ್ಜೇಗೇರಿಸುವ ಕಾಮಗಾರಿ ಕೈಗೆತ್ತಿಕೊಂಡಿದ್ದು, ಇದನ್ನು ಎರಡು ಪ್ಯಾಕೇಜುಗಳಾಗಿ ಕೈಗೊಳ್ಳಲಾಗಿರುತ್ತದೆ.<br>1) <u>ಪ್ಯಾಕೇಜ್-1</u><br>ಅಡ್ಡಹೊಳೆಯಿಂದ (ಗುಂಡ್ಯ ಸಮೀಪ) ಬಂಟ್ವಾಳ ಕ್ರಾಸ್ ಸೆಕ್ಷನ್ ವರೆಗಿನ 4 ಲೇನ್ ರಸ್ತೆ ಕಾಮಗಾರಿ ಡಿಸೈನ್ ಕಿ.ಮೀ.255.703 ರಿಂದ ಡಿಸೈನ್ ಕಿ.ಮೀ.270.270 ವರೆಗೆ ಒಟ್ಟು 15.13 ಕಿ.ಮೀ ಉದ್ದದಲ್ಲಿ ಕೈಗೊಳ್ಳಲಾಗಿದೆ. ಪ್ರಸ್ತುತ ಈ ಯೋಜನೆಯ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ<br><br>ಯೋಜನೆಯ ವಿಳಂಬ ಮತ್ತು ಅಡಚಣೆಗಳ ಕಾರಣಗಳು:<br>• ಅತಿಯಾದ ಕಾಲಿಕ ಮತ್ತು ಅಕಾಲಿಕ ಮಳೆಯ ಪರಿಣಾಮ<br>• ಸ್ಥಳೀಯ ನಾಗರಿಕರಿಂದ ಹೆಚ್ಚುವರಿ ರಚನೆಗಳು/ಸೌಲಭ್ಯಗಳ ಬೇಡಿಕೆ, ಇದರ ಫಲವಾಗಿ ಕಾಮಗಾರಿಯ ಕಾರ್ಯವ್ಯಾಪ್ತಿಯ ಬದಲಾವಣೆ (Change of Scope) ಆಗಿರುವುದು.<br>• 2.5315 ಹೆಕ್ಟೇರ್ ಅರಣ್ಯ ತಿರುವು.<br>• ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತಡೆಯಾಜ್ಞೆ.<br><br>ಪ್ರಸ್ತುತ ಪೂರ್ಣಗೊಂಡ ಉದ್ದ: 14.31 ಕಿ.ಮೀ.<br>ಕಾಮಗಾರಿಯ ಪೂರ್ಣಗೊಳಿಸುವ ನಿರೀಕ್ಷಿತ ದಿನಾಂಕ:31.08.2025.<br><br>2) <u>ಪ್ಯಾಕೇಜ್-2</u><br>ಅಡ್ಡಹೊಳೆಯಿಂದ (ಗುಂಡ್ಯ ಸಮೀಪ) ಬಂಟ್ವಾಳ ಕ್ರಾಸ್ ಸೆಕ್ಷನ್ ವರೆಗಿನ 4 ಪಥದ ರಸ್ತೆ ಕಾಮಗಾರಿ ಕಿ.ಮೀ.270.270 ರಿಂದ ಕಿ.ಮೀ.318.55 ವರೆಗೆ ಕೈಗೊಳ್ಳಲಾಗಿದೆ. ಈ ಪ್ಯಾಕೇಜ್‌ನಡಿ ಕಲ್ಲಡ್ಕ ಪಟ್ಟಣದಲ್ಲಿ ಫ್ಲೈಓವರ್ ನಿರ್ಮಾಣ ಸೇರಿದಂತೆ ಕಿ.ಮೀ.311.57 ರಿಂದ 313.67 ವರೆಗೆ ಅಪ್ರೋಚ್ ರಸ್ತೆ ಒಳಗೊಂಡಂತೆ ಒಟ್ಟು ಯೋಜನೆಯ ಉದ್ದ 48.485 ಕಿ.ಮೀ ಗಳಾಗಿರುತ್ತದೆ.<br><br>ಯೋಜನೆಯ ವಿಳಂಬ ಮತ್ತು ಅಡಚಣೆಗಳ ಕಾರಣಗಳು:<br>• ಅತಿಯಾದ ಕಾಲಿಕ ಮತ್ತು ಅಕಾಲಿಕ ಮಳೆಯ ಪರಿಣಾಮ<br>• ಸ್ಥಳೀಯ ನಾಗರಿಕರಿಂದ ಹೆಚ್ಚುವರಿ ರಚನೆಗಳು/ಸೌಲಭ್ಯಗಳ ಬೇಡಿಕೆ, ಇದರ ಫಲವಾಗಿ ಕಾಮಗಾರಿಯ ಕಾರ್ಯವ್ಯಾಪ್ತಿಯ ಬದಲಾವಣೆ (Change of Scope) ಆಗಿರುವುದು.</td></tr>
<tr><td>ಆ)</td><td>ಈ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಯಾವಾಗ ಮುಕ್ತಾಯಗೊಳ್ಳಬೇಕಾಗಿತ್ತು; ಈ ಕಾಮಗಾರಿಯ ಒಟ್ಟು ಟೆಂಡರ್ ವೆಚ್ಚ ಎಷ್ಟು; ಟೆಂಡರ್‌ದಾರರಿಗೆ ಪಾವತಿಸಿದ ಮೊತ್ತ ಎಷ್ಟು; (ವಿವರ ನೀಡುವುದು)</td></tr>
</table>

<table>
<tr>
<td></td>
<td></td>
<td>ಪ್ರಸ್ತುತ ಪೂರ್ಣಗೊಂಡ ಉದ್ದ 38.15 ಕಿ.ಮೀ.<br>ಕಾಮಗಾರಿಯನ್ನು ಪೂರ್ಣಗೊಳಿಸುವ ನಿರೀಕ್ಷಿತ ದಿನಾಂಕ:31.08.2025.
<table>
<tr><td>Project</td><td>**Package-I:-** 4L of Addahole (Near Gundya) to Bantwal Cross section</td><td>**Package-II:-** 4L of Addahole (Near Gundya) to Bantwal Cross section</td></tr>
<tr><td>Sanctioned Cost</td><td>354.27 Crs</td><td>**1100.88 Crs**</td></tr>
<tr><td>Expenditure Incurred</td><td>345.61 Crs</td><td>**894.06Crs**</td></tr>
</table>
</td>
</tr>
<tr>
<td>ಇ)</td>
<td>2 ವರ್ಷಗಳಿಂದ ಈ ರಸ್ತೆಯ ನಿರ್ಮಾಣ ಸಂದರ್ಭದಲ್ಲಿ ಬದಲಿ, ರಸ್ತೆ ಸರ್ವಿಸ್ ರಸ್ತೆಯನ್ನು ನಿರ್ಮಿಸದೇ ಗುತ್ತಿಗೆದಾರರು ಟೆಂಡರ್ ನಿಯಮ ಉಲ್ಲಂಘಿಸಿದರ ಬಗ್ಗೆ ಇಲಾಖೆ ಕ್ರಮ ಕೈಗೊಂಡಿದೆಯೇ; ರಸ್ತೆ ನಿರ್ಮಾಣ ಸಂದರ್ಭದಲ್ಲಿ ಸಾರ್ವಜನಿಕರಿಗೆ ಪರ್ಯಾಯವಾಗಿ ಸಂಚರಿಸುವ ರಸ್ತೆ ನಿರ್ಮಿಸುವ ಜವಾಬ್ದಾರಿ ಯಾರದ್ದಾಗಿರುತ್ತದೆ; (ವಿವರ ನೀಡುವುದು)</td>
<td>ರಸ್ತೆಯ ಭೂಗಡಿ ಅಂಚು ಸೀಮಿತವಾಗಿದ್ದು, ರಸ್ತೆ ಮರುಪಂಕ್ತಿಕರಣ, ಪರ್ಯಾಯ / ಸರ್ವಿಸ್ ರಸ್ತೆಯನ್ನು ನಿರ್ಮಿಸಲಾಗಿರುವುದಿಲ್ಲ. ಸರ್ವಿಸ್ ರಸ್ತೆಗಳನ್ನು Vehicle Over Pass ಗಳಲ್ಲಿ ಗುತ್ತಿಗೆ ಕರಾರಿನ್ವಯ ನಿರ್ಮಿಸಲಾಗಿರುತ್ತದೆ.</td>
</tr>
<tr>
<td>ಈ)</td>
<td>ಗುಂಡ್ಯಾ ಬಿ.ಸಿ. ರೋಡ್ ಪೂರ್ಣಗೊಳಿಸಲು ನಿಗದಿಪಡಿಸಿದ ಸಮಯ ಎಷ್ಟು; ಸರ್ವಿಸ್ ರಸ್ತೆಯನ್ನು ಪೂರ್ಣಗೊಳಿಸುವುದು ಯಾವಾಗ; (ವಿವರ ನೀಡುವುದು)</td>
<td>
<table>
<tr><td>Project</td><td>**Package-I:-** 4L of Addahole (Near Gundya) to Bantwal Cross section</td><td>**Package-II:-** 4L of Addahole (Near Gundya) to Bantwal Cross section</td></tr>
<tr><td>Schedule Completion Date</td><td>30.09.2023</td><td>22.11.2023</td></tr>
<tr><td>Likely Completion date</td><td>31.08.2025</td><td>31.08.2025</td></tr>
</table>
</td>
</tr>
<tr>
<td>ಉ)</td>
<td>ಮಂಗಳೂರಿನ ಬಿರ್ಕಣಕಟ್ಟೆಯಿಂದ ಮೂಡಬಿದ್ರೆ-ಕಾರ್ಕಳ ಸಂಪರ್ಕ ರಸ್ತೆ NH-169 ಕಾಮಗಾರಿ ಪ್ರಾರಂಭಗೊಂಡಿದ್ದು ಯಾವಾಗ ಈ ರಸ್ತೆಯ ಪ್ರಾರಂಭಿಕ ಅಂದಾಜು ವೆಚ್ಚ ಎಷ್ಟು; ಪ್ರಸ್ತುತ ತಗುಲಿದ ವೆಚ್ಚ ಎಷ್ಟು; (ವಿವರ ನೀಡುವುದು) ರಸ್ತೆಯ ನಿರ್ಮಾಣವು ಮನಬಂದಂತೆ ಬದಲಾಯಿಸುತ್ತಿರುವುದು ಯಾವ ಕಾರಣಕ್ಕಾಗಿ ವಿನ್ಯಾಸವನ್ನು ಎಷ್ಟು ಬಾರಿ ಬದಲಾಯಿಸಲಾಗಿದೆ; ಹಾಗೂ ರಸ್ತೆ ಪೂರ್ಣಗೊಳಿಸುವುದು ಯಾವಾಗ? (ವಿವರ ನೀಡುವುದು)</td>
<td>ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿರುವಂತೆ ಸನ್ನೂರು ಜಂಕ್ಷನ್‌ನಿಂದ ಬಿಕರ್ಣಕಟ್ಟೆ ಸೆಕ್ಷನ್‌ವರೆಗೆ (NH-169) ಕಿ.ಮಿ.698.850 ರಿಂದ ಕಿ.ಮೀ.744.190 ರವರೆಗೆ ನಾಲ್ಕು ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು HAM ಮಾದರಿಯಲ್ಲಿ ಕೈಗೊಳ್ಳಲಾಗಿದೆ.<br>• ಒಟ್ಟು ಯೋಜನೆಯ ಉದ್ದ – 45 ಕಿ.ಮೀ<br>• ನಿಗದಿತ ಪ್ರಾರಂಭದ ದಿನಾಂಕ: 10.10.2022<br>• ಪೂರ್ಣಗೊಳ್ಳುವ ನಿರೀಕ್ಷಿತ ದಿನಾಂಕ:31.12.2025<br>• ಪ್ರಸ್ತುತ ಭೌತಿಕ ಪ್ರಗತಿ – 55.35%<br>• ಮಂಜೂರಾದ ಒಟ್ಟು ಮೊತ್ತ: ರೂ 1386.00 ಕೋಟಿ<br>• ತಗುಲಿದ ವೆಚ್ಚ ರೂ.953.60 ಕೋಟಿ.<br><br>ಸ್ಥಳೀಯ ಜನರ ಒತ್ತಾಯದ ಮೇರೆಗೆ ಪ್ರಾರಂಭಿಕ ವಿನ್ಯಾಸಗಳನ್ನು ಕಾಮಗಾರಿಯ ಕಾರ್ಯವ್ಯಾಪ್ತಿಯ ಬದಲಾವಣೆಯಲ್ಲಿ ಪ್ರಸ್ತಾಪಿಸಲಾಗಿದೆ.</td>
</tr>
</table>

ಸಂಖ್ಯೆ: ಲೋಇ 110 ಸಿಎನ್‌ಹೆಚ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು